# ಕರ್ನಾಟಕ ಸರ್ಕಾರ
## (ವಿದ್ಯುತ್ ಪರಿವೀಕ್ಷಣಾಲಯ)

ಮಾಹಿತಿ ಹಕ್ಕು 2005 ಸೆಕ್ಷನ್ 4 (1) (ಬಿ) ರ ಅನುಗುಣವಾಗಿ ಉಪ ಮುಖ್ಯ ವಿದ್ಯುತ್ ಪರಿವೀಕ್ಷಕರು, ಬೆಂಗಳೂರು ಹೆಚ್ಚುವರಿ ಉತ್ತರ, ಬೆಂಗಳೂರು ಕಛೇರಿಯ ಮಾಹಿತಿ.

**1. ಸಂಸ್ಥೆಯ ಧ್ಯೇಯೋದ್ಧೇಶ ಮತ್ತು ಕಾರ್ಯಗಳು:**

ವಿದ್ಯುತ್ ಪರಿವೀಕ್ಷಣಾಲಯ ಇಲಾಖೆಯಲ್ಲಿ ಬೆಂಗಳೂರು ಉತ್ತರ ವಲಯದ ವ್ಯಾಪ್ತಿಗೆ ಉಪ ಮುಖ್ಯ ವಿದ್ಯುತ್ ಪರಿವೀಕ್ಷಕರು, ಬೆಂಗಳೂರು ಹೆಚ್ಚುವರಿ ಉತ್ತರ, ಬೆಂಗಳೂರು ಕಛೇರಿಯು ಒಳಪಟ್ಟಿರುತ್ತದೆ ಹಾಗು ಈ ಕಛೇರಿ ವ್ಯಾಪ್ತಿಗೆ ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ ನಿಗಮ ನಿಯಮಿತದ ಉಪ-ವಿಭಾಗಗಳಾದ ಎನ್-1, ಎನ್-2, ಎನ್-3, ಎನ್-7, ನೆಲಮಂಗಲ, ದೊಡ್ಡಬಳ್ಳಾಪುರ ಮತ್ತು ಚಿಕ್ಕಬಳ್ಳಾಪುರ ಜಿಲ್ಲೆಗಳು ಒಳಪಟ್ಟಿರುತ್ತವೆ. ಈ ಕಛೇರಿಯು ನಂ. 723, "ಲಕ್ಷ್ಮಿನಾರಾಯಣ", 2 ನೇ ಮಹಡಿ, ಹೋಟೆಲ್ ಕದಂಬ ಎದುರು, ಮೋದಿ ಹಾಸ್ಪಿಟಲ್ ರಸ್ತೆ, 2ನೇ ಹಂತ, ಪಶ್ಚಿಮ ಕಾರ್ಡ್ ರಸ್ತೆ, ಬಸವೇಶ್ವರನಗರ, ಬೆಂಗಳೂರು-560086 ಕಾರ್ಯನಿರ್ವಹಿಸುತ್ತಿದ್ದು, ಉಪ ಮುಖ್ಯ ವಿದ್ಯುತ್ ಪರಿವೀಕ್ಷಕರು ಈ ಕಛೇರಿಯ ಮುಖ್ಯಸ್ಥರಾಗಿರುತ್ತಾರೆ.

ಈ ಕಛೇರಿಯ ತಾಂತ್ರಿಕ ವರ್ಗದಲ್ಲಿ ಉಪ ಮುಖ್ಯ ವಿದ್ಯುತ್ ಪರಿವೀಕ್ಷಕರವರನ್ನು ಒಳಗೊಂಡಂತೆ, ಒಂದು ವಿದ್ಯುತ್ ಪರಿವೀಕ್ಷಕರು, ಒಂದು ಉಪ ವಿದ್ಯುತ್ ಪರಿವೀಕ್ಷಕರು, ಮೂರು ಸಹಾಯಕ ವಿದ್ಯುತ್ ಪರಿವೀಕ್ಷಕರುಗಳು(ಕ್ಷೇತ್ರಿಯ) ಹಾಗೂ ಒಂದು ಸಹಾಯಕ ವಿದ್ಯುತ್ ಪರಿವೀಕ್ಷಕರು(ಕಛೇರಿ) ಮತ್ತು ಏಳು ತಾಂತ್ರಿಕೇತರ ಲಿಪಿಕ/ ಸಿಬ್ಬಂದಿಯಾಗಿ ಒಂದು ಅಧೀಕ್ಷಕರು, ಒಂದು ಪ್ರಥಮ ದರ್ಜೆ ಸಹಾಯಕರು, ಎರಡು ದ್ವಿತೀಯ ದರ್ಜೆ ಸಹಾಯಕರು, ಸಹಾಯಕರು, ಚಾಲಕರು, ಗಣಕಯಂತ್ರ ಆಪರೇಟರ್ ಮತ್ತು ಗ್ರೂಪ್ ಡಿ ರವರುಗಳು ಕಾರ್ಯ ನಿರ್ವಹಿಸುತ್ತಿರುತ್ತಾರೆ ಅಲ್ಲದೇ ಈ ಕಛೇರಿ ವ್ಯಾಪ್ತಿಗೆ ಉಪ ವಿದ್ಯುತ್ ಪರಿವೀಕ್ಷರ ಕಛೇರಿ, ಚಿಕ್ಕಬಳ್ಳಾಪುರ ಕೂಡ ಒಳಪಟ್ಟಿರುತ್ತದೆ.

**ಬೆಂಗಳೂರು ಹೆಚ್ಚುವರಿ ಉತ್ತರ ಕಛೇರಿಯ ಮುಖ್ಯ ಉದ್ದೇಶಗಳು:**

ಈ ಕಛೇರಿಯ ಮುಖ್ಯ ಕಾರ್ಯೋದ್ಧೇಶವು ಕಛೇರಿ ಕಾರ್ಯವ್ಯಾಪ್ತಿಯಲ್ಲಿ ಬರುವ ಎಲ್ಲಾ ವಿದ್ಯುತ್ ಸ್ಥಾವರಗಳು ಸುಸ್ಥಿತಿಯಲ್ಲಿರಲು ಮತ್ತು ಮಾನವರಿಗೆ, ಪ್ರಾಣಿಗಳಿಗೆ ಮತ್ತು ಆಸ್ತಿಗೆ ವಿದ್ಯುತ್ತಿನಿಂದ ಯಾವುದೇ ಹಾನಿ ಆಗದಂತೆ ತಡೆಗಟ್ಟಲು ಅಗತ್ಯ ಕ್ರಮ ಕೈಗೊಳ್ಳುವುದಾಗಿರುತ್ತದೆ. ಸದರಿ ವಿಷಯಗಳನ್ನು ಸಾಧಿಸಲು ಕೆಳಕಾಣಿಸಿದ ಕಾರ್ಯಗಳನ್ನು ನಿರ್ವಹಿಸಲಾಗುತ್ತದೆ.

1. ಡಿ.ಓ.ಪಿ. ಗೆ ಅನುಗುಣವಾಗಿ ಕೆ.ಪಿ.ಟಿ.ಸಿ.ಎಲ್. ಮತ್ತು ವಿದ್ಯುತ್ ಸರಬರಾಜು ಕಂ. ಗಳ ವಿದ್ಯುತ್ ಸ್ಥಾವರಗಳ ಮತ್ತು ಗ್ರಾಹಕರಿಗೆ ಸೇರಿದಂತಹ ಹೆಚ್.ಟಿ./ಎಲ್.ಟಿ. ಸ್ಥಾವರಗಳು, ವಿದ್ಯುತ್ ಜನಕಗಳು, ಬಹುಮಹಡಿ ಕಟ್ಟಡಗಳು, ಲಿಫ್ಟ್‌ಗಳು ಮತ್ತು ಎಸ್ಕಲೇಟರ್‌ಗಳು, ಕ್ಷ-ಕಿರಣ, ಸಿನಿಮಾ ಮತ್ತು ನಿಯಾನ್ ಸೈನ್ ವಿದ್ಯುತ್ ಸ್ಥಾವರಗಳ ನೀಲಿನಕ್ಷೆ ಪರಿಶೀಲನೆ ಮತ್ತು ಅನುಮೋದನೆ.
2. ಡಿ.ಓ.ಪಿ. ಗೆ ಅನುಗುಣವಾಗಿ ಮೇಲ್ಕಂಡ ವಿದ್ಯುತ್ ಸ್ಥಾವರಗಳ ಪ್ರಥಮ ಪರಿವೀಕ್ಷಣೆ ಕೈಗೊಂಡು ಸುರಕ್ಷತೆಯ ಪ್ರಮಾಣವನ್ನು ಪರಿಶೀಲಿಸಿ ಚಾಲನಾ ಅನುಮೋದನೆ ನೀಡುವುದು.
3. ಡಿ.ಓ.ಪಿ. ಗೆ ಅನುಗುಣವಾಗಿ ಸದರಿ ವಿದ್ಯುತ್ ಸ್ಥಾವರಗಳ ನಿಯತಕಾಲಿಕ ಪರಿವೀಕ್ಷಣೆ ನಡೆಸುವುದು.
4. ಡಿ.ಓ.ಪಿ. ಗೆ ಅನುಗುಣವಾಗಿ ವಿದ್ಯುತ್ ಅಪಘಾತಗಳ ತನಿಖೆ ಕೈಗೊಂಡು ಸರ್ಕಾರಕ್ಕೆ ವರದಿ ಸಲ್ಲಿಸುವುದು.
5. ಬೆಂಗಳೂರು ಹೆಚ್ಚುವರಿ ಉತ್ತರ ವಿದ್ಯುತ್ ಗುತ್ತಿಗೆದಾರರ ಪರವಾನಗಿ, ವಿದ್ಯುತ್ ಪರ್ಯವೇಕ್ಷಕರ ರಹದಾರಿ ಮತ್ತು ತಂತಿ ಕೆಲಸಗಾರರ ರಹದಾರಿಗಳಿಗೆ ಹಿಂಬರಹ ಮಾಡುವುದು.
6. ಬೆಂಗಳೂರು ಹೆಚ್ಚುವರಿ ಉತ್ತರ ವ್ಯಾಪ್ತಿಯಲ್ಲಿ ಬರುವ ಸಿನಿಮಾ ಅಪರೇಟರ್‌ಗಳ ಪರ್ಮಿಟ್‌ಗಳ ನವೀಕರಣ ಮತ್ತು ಹಿಂಬರಹಗೊಳಿಸುವುದು.

**2. ಅಧಿಕಾರಿಗಳು ಮತ್ತು ಸಿಬ್ಬಂದಿಗಳ ಅಧಿಕಾರ ಮತ್ತು ಕರ್ತವ್ಯಗಳು:**

**ಉಪ ಮುಖ್ಯ ವಿದ್ಯುತ್ ಪರಿವೀಕ್ಷಕರು**

ಉಪ ಮುಖ್ಯ ವಿದ್ಯುತ್ ಪರಿವೀಕ್ಷಕರು ಕಛೇರಿಯ ಮುಖ್ಯಸ್ಥರಾಗಿರುತ್ತಾರೆ. ಕಛೇರಿ ಕಾರ್ಯ ವಿಧಾನ ಕೈಪಿಡಿ ಅನ್ವಯ ಕಾಯ್ದೆ ಮತ್ತು ನಿಯಮಗಳ ಅಡಿಯಲ್ಲಿ ಅಧಿಕಾರ ಪ್ರತ್ಯಾಯೋಜನೆ ಅನ್ವಯ ಕಾರ್ಯನಿರ್ವಹಿಸುವುದು ಮತ್ತು ಹಿರಿಯ ಅಧಿಕಾರಿಗಳು ಸೂಚಿಸುವ ಇತರೆ ಕಾರ್ಯಗಳನ್ನು ನಿರ್ವಹಿಸುವುದು.

**ವಿದ್ಯುತ್ ಪರಿವೀಕ್ಷಕರು**

ಕಛೇರಿ ಕಾರ್ಯ ವಿಧಾನ ಕೈಪಿಡಿ ಅನ್ವಯ ಕಾಯ್ದೆ ಮತ್ತು ನಿಯಮಗಳ ಅಡಿಯಲ್ಲಿ ಅಧಿಕಾರ ಪ್ರತ್ಯಾಯೋಜನೆ ಅನ್ವಯ ಕಾರ್ಯನಿರ್ವಹಿಸುವುದು ಮತ್ತು ಹಿರಿಯ ಅಧಿಕಾರಿಗಳು ಸೂಚಿಸುವ ಇತರೆ ಕಾರ್ಯಗಳನ್ನು ನಿರ್ವಹಿಸುವುದು.

**ಉಪ ವಿದ್ಯುತ್ ಪರಿವೀಕ್ಷಕರು**

ಕಛೇರಿ ಕಾರ್ಯ ವಿಧಾನ ಕೈಪಿಡಿ ಅನ್ವಯ ಕಾಯ್ದೆ ಮತ್ತು ನಿಯಮಗಳ ಅಡಿಯಲ್ಲಿ ಅಧಿಕಾರ ಪ್ರತ್ಯಾಯೋಜನೆ ಅನ್ವಯ ಕಾರ್ಯನಿರ್ವಹಿಸುವುದು ಮತ್ತು ಹಿರಿಯ ಅಧಿಕಾರಿಗಳು ಸೂಚಿಸುವ ಇತರೆ ಕಾರ್ಯಗಳನ್ನು ನಿರ್ವಹಿಸುವುದು.

**ಸಹಾಯಕ ವಿದ್ಯುತ್ ಪರಿವೀಕ್ಷಕರು–(ಕಛೇರಿ)**

ಸಹಾಯಕ ವಿದ್ಯುತ್ ಪರಿವೀಕ್ಷಕರು (ಕಛೇರಿ) ರವರು ಉಪ ಮುಖ್ಯ ವಿದ್ಯುತ್ ಪರಿವೀಕ್ಷಕರರವರಿಗೆ ತಾಂತ್ರಿಕ ಸಹಾಯಕ ರಾಗಿರುತ್ತಾರೆ. ಉಪ ಮುಖ್ಯ ವಿದ್ಯುತ್ ಪರಿವೀಕ್ಷಕರ ಕಾರ್ಯ ವ್ಯಾಪ್ತಿಯಲ್ಲಿ ಬರುವಂತಹ ಎಲ್ಲಾ ವಿಧವಾದ ವಿದ್ಯುತ್ ಸ್ಥಾವರಗಳ ನಕ್ಷೆ ಅನುಮೋದನೆ ಮತ್ತು ಚಾಲನಾ ಅನುಮೋದನೆಗಳ ಕಡತಗಳನ್ನು ಪರಿಶೀಲಿಸಿ ಟಿಪ್ಪಣಿ ಮಂಡಿಸುವುದು ಮತ್ತು ತಾಂತ್ರಿಕ ವಿಷಯಕ್ಕೆ ಸಂಬಂಧಪಟ್ಟ ಕಡತಗಳ ವಿಲೇವಾರಿಗೆ ಸೂಕ್ತ ಕ್ರಮ ಕೈಗೊಳ್ಳುವುದು ಹಾಗೂ ಉಪ ಮುಖ್ಯ ವಿದ್ಯುತ್ ಪರಿವೀಕ್ಷಕರು, ಬೆಂಗಳೂರು ಹೆಚ್ಚುವರಿ ಉತ್ತರ ಕಛೇರಿಯ ಸಾರ್ವಜನಿಕ ತಾಂತ್ರಿಕ ಮಾಹಿತಿ ಅಧಿಕಾರಿಯಾಗಿ ಕಾರ್ಯನಿರ್ವಹಿಸುವುದು.

**ಸಹಾಯಕ ವಿದ್ಯುತ್ ಪರಿವೀಕ್ಷಕರು–1, 2 ಮತ್ತು 3**

ಕಛೇರಿ ಕಾರ್ಯ ವಿಧಾನ ಕೈಪಿಡಿ ಅನ್ವಯ ಕಾಯ್ದೆ ಮತ್ತು ನಿಯಮಗಳ ಅಡಿಯಲ್ಲಿ ಅಧಿಕಾರ ಪ್ರತ್ಯಾಯೋಜನೆ ಅನ್ವಯ ಹಾಗು ಕಾರ್ಯವ್ಯಾಪ್ತಿಗೆ ಅನುಗುಣವಾಗಿ ಕಾರ್ಯನಿರ್ವಹಿಸುವುದು ಮತ್ತು ಹಿರಿಯ ಅಧಿಕಾರಿಗಳು ಸೂಚಿಸುವ ಇತರೆ ಕಾರ್ಯಗಳನ್ನು ನಿರ್ವಹಿಸುವುದು.

**ಅಧೀಕ್ಷಕರು**

ಹಾಜರಾತಿ ಪುಸ್ತಕದ ನಿರ್ವಹಣೆ, ಕಛೇರಿ ಖರ್ಚಿನ ವರದಿ, (62–ಬಿ) 0043 ಕಂದಾಯ ಚಲನ್ ವರದಿಯ ನಿರ್ವಹಣೆ ಅಧಿಕಾರಿಗಳ ಹಾಗೂ ಸಿಬ್ಬಂದಿಯವರ ಸೇವಾ ಪುಸ್ತಕ ನಿರ್ವಹಣೆ, ಹೆಚ್. ಆರ್. ಎಂ.ಎಸ್. ಮೂಲಕ ಅಧಿಕಾರಿಗಳ/ ಸಿಬ್ಬಂದಿ ವೇತನ ಬಿಲ್ ಇತರೆ ಬಿಲ್ಲುಗಳ ತಯಾರಿಕೆ, ಹಾಗೂ ಅನುದಾನ ಹಂಚಿಕೆ ಹಾಗೂ ಆಡಳಿತಾತ್ಮಕ ವಿಷಯಗಳಲ್ಲಿ ವ್ಯವಸ್ಥಾಪಕರಿಗೆ ಸಹಕರಿಸುವುದು. ಆದಾಯ ತೆರಿಗೆ, ಟಿ.ಡಿ.ಎಸ್ ಪೈಲ್ ಮಾಡುವುದು. ಮಾಹಿತಿ ಹಕ್ಕು ಅಧಿನಿಯಮಕ್ಕೆ ಸಂಬಂಧಪಟ್ಟಂತೆ ಕಡತಗಳನ್ನು ನಿರ್ವಹಿಸುವುದು. ಆಡಳಿತ. ಅಕೌಂಟೆಂಟ್ ಜನರಲ್‌ರವರ ಲೆಕ್ಕ ತಪಾಸಣೆಗೆ ಉತ್ತರಿಸುವುದು. ಕಛೇರಿಯ ದಾಖಲೆಗಳ ಮೇಲ್ವಿಚಾರಣೆ ಮತ್ತು ನಿರ್ವಹಣೆ.

**ಪ್ರಥಮ ದರ್ಜೆ ಸಹಾಯಕರು**

ಅಧಿಕಾರಿಗಳ / ಸಿಬ್ಬಂದಿಗಳ ವೇತನದ ರಿಜಿಸ್ಟರ್ ನಿರ್ವಹಣೆ ಮತ್ತು ತಯಾರಿಕೆ, ಸಿಬ್ಬಂದಿಗಳ ರಜೆ ಲೆಕ್ಕ ಇಡುವುದು, ಗಳಿಕೆ ರಜೆ ನಗದೀಕರಣ ಬಿಲ್ಲು ಸಿದ್ಧಪಡಿಸುವುದು, ರಶೀದಿಪುಸ್ತಕ, ನಗದು ಪುಸ್ತಕ, ಸಾದಿಲ್ವಾರು ಬಿಲ್ಲು ಸಿದ್ಧಪಡಿಸುವುದು ಮತ್ತು ಆರ್.ಸಿ.ಬಿ. ನಿರ್ವಹಣೆ, 0043 ಅಡಿಯಲ್ಲಿ ಸಂಗ್ರಹಣೆಯಾದ ಕಂದಾಯವನ್ನು ಬ್ಯಾಂಕಿಗೆ ಜಮಾ ಮಾಡುವುದು 0043 ಚಲನ್ ವರದಿ ಮತ್ತು ಆರ್.ಸಿ.ಬಿ. ವರದಿ ಸಿದ್ಧಪಡಿಸುವುದು, ಅಧೀನ ಕಛೇರಿಗಳಿಂದ ಬಂದ ಸಾದಿಲ್ವಾರು ಬಿಲ್ಲುಗಳನ್ನು ಮೇಲುರುಜುಗೊಳಿಸುವ ಕೆಲಸದಲ್ಲಿ ಅಧೀಕ್ಷಕರಿಗೆ ನೆರವಾಗುವುದು. ರಶೀದಿ ಪುಸ್ತಕವನ್ನು ರಿಜಿಸ್ಟರ್‌ಗಳ ನಿರ್ವಹಣೆ, 0043 ಚಲನ್ ವರದಿ ಹಾಗೂ ಆರ್.ಸಿ.ಬಿ. ವರದಿ ಸಿದ್ಧಪಡಿಸುವುದು, ಇನ್ನಿತರ ಕಛೇರಿಯ ಆಡಳಿತಾತ್ಮಕ ಕೆಲಸಗಳ ನಿರ್ವಹಣೆ.

**ದ್ವಿತೀಯ ದರ್ಜೆ ಸಹಾಯಕರು**

ಸ್ವೀಕೃತಿ ಮತ್ತು ರವಾನೆ ರಿಜಿಸ್ಟರ್ ಸ್ಟ್ಯಾಂಪ್ ಲೆಕ್ಕ ಪತ್ರ ರಿಜಿಸ್ಟರ್ ನಿರ್ವಹಣೆ– ಪತ್ರಗಳನ್ನು ದಾಖಲಿಸುವುದು ಹಾಗೂ ರವಾನಿಸುವುದು ತಾಂತ್ರಿಕ / ತಾಂತ್ರಿಕೇತರ ಕಡತಗಳ ನಿರ್ವಹಣೆ, ವಿದ್ಯುತ್ ತೆರಿಗೆ ' ಜಿ' ಯ ರಿಜಿಸ್ಟರ್ ನಿರ್ವಹಣೆ, ಚಲನ ವಲನ ರಿಜಿಸ್ಟರ್ ನಿರ್ವಹಣೆ, ಕಛೇರಿ ಮುಖ್ಯಸ್ಥರ ಸಲಹೆ ಮೇರೆಗೆ ಇನ್ನಿತರ ಆಡಳಿತಾತ್ಮಕ ಕಾರ್ಯ ನಿರ್ವಹಿಸುವುದು.

**ವಾಹನ ಚಾಲಕರು**

ಸರ್ಕಾರದ ವಾಹನವನ್ನು ಉತ್ತಮ ಚಾಲನೆ ಸ್ಥಿತಿಯಲ್ಲಿಡುವುದು ಮತ್ತು ಅಧಿಕಾರಿಗಳ ಪರಿವೀಕ್ಷಣೆಗೆ ಲಭ್ಯವಿರುವುದು.

**ಹೆಲ್ಪರ್**

ಅಧಿಕಾರಿಗಳ ಪರಿವೀಕ್ಷಣೆಯಲ್ಲಿ ಸಹಾಯ ಮಾಡುವುದು ಮತ್ತು ಕಡತಗಳನ್ನು ನಿರ್ವಹಣೆ ಮಾಡುವುದು.

**ಗ್ರೂಪ್ ಡಿ ನೌಕರರು**

ಕಛೇರಿಯ ಶುಚಿತ್ವವನ್ನು ಕಾಪಾಡುವುದು, ಸ್ಥಳೀಯ ಟಪಾಲುಗಳನ್ನು ವಿತರಿಸುವುದು, ಖಜಾನೆಗೆ ಸಂಬಂಧಿಸಿದ ಕೆಲಸಗಳನ್ನು ನಿರ್ವಹಿಸುವುದು, ಕಡತಗಳನ್ನು ನಿರ್ವಹಣೆ ಮಾಡುವುದು ಮತ್ತು ಕಛೇರಿಯ ಮುಖ್ಯಸ್ಥರು ನಿಗದಿಪಡಿಸಿದ ಕೆಲಸಗಳನ್ನು ನಿರ್ವಹಿಸುವುದು,

ಗಣಕಯಂತ್ರ ಆಪರೇಟರ್

ಉಪ ಮುಖ್ಯ ವಿದ್ಯುತ್ ಪರಿವೀಕ್ಷಕರು ಹಾಗೂ ಮತ್ತು ಹಿರಿಯ ಅಧಿಕಾರಿಗಳು ಸೂಚಿಸುವ ಕೆಲಸ ಕಾರ್ಯಗಳು ಮತ್ತು ಉಪ ಮುಖ್ಯ ವಿದ್ಯುತ್ ಪರಿವೀಕ್ಷಕರ ಕಛೇರಿಗೆ ಬರುವ ಪತ್ರ ಮತ್ತು ಕಡತಗಳ ಚಲನವಲನಗಳನ್ನು ನಿರ್ವಹಿಸುವುದು. ಕಛೇರಿಯ ಎಲ್ಲಾ ಕಾಗದ ಪತ್ರಗಳನ್ನು ಬೆರಳಚ್ಚು ಮಾಡುವುದು.

**3. ಕಛೇರಿ ಕೆಲಸ ಕಾರ್ಯಗಳ ನಿರ್ವಹಣೆಯ ಪದ್ಧತಿ ಮತ್ತು ನಿರ್ಣಯದ ಅಧಿಕಾರ:**

ಡಿ.ಒ.ಪಿ. ಪ್ರಕಾರ ನಕ್ಷೆ ಅನುಮೋದನೆಗೆ ಮತ್ತು ವಿದ್ಯುತ್ ಸ್ಥಾವರಗಳ ಪರಿವೀಕ್ಷಣೆ ಮತ್ತು ಅನುಮೋದನೆಗೆ ಸಲ್ಲಿಸಿದಂತಹ ಅರ್ಜಿಗಳನ್ನು ಪರಿಶೀಲಿಸುವುದು. ಸಂಬಂಧಿಸಿದ ಅಧಿಕಾರಿಗಳು ಅರ್ಜಿಗಳನ್ನು ಪರಿಶೀಲಿಸಿ ನ್ಯೂನತೆಗಳೇನಾದರೂ ಇದ್ದಲ್ಲಿ ಅರ್ಜಿದಾರರಿಗೆ ತಿಳಿಸುವುದು. ಅರ್ಜಿ ಸರಿ ಇದ್ದಲ್ಲಿ ನಕ್ಷೆ ಅನುಮೋದನೆ ಅಥವಾ ವಿದ್ಯುತ್ ಸ್ಥಾವರದ ಪರಿವೀಕ್ಷಣೆ ಮತ್ತು ಅನುಮೋದನೆಗೆ ಕ್ರಮ ಕೈಗೊಳ್ಳುವುದು. ಡಿ.ಒ.ಪಿ. ಗೆ ಅನುಗುಣವಾಗಿ ವಿದ್ಯುತ್ ಸ್ಥಾವರಗಳ ನಿಯತಕಾಲಿಕ ಪರಿವೀಕ್ಷಣೆ ಮಾಡಿ ನ್ಯೂನತೆಗಳನ್ನು ಸರಿಪಡಿಸಿಕೊಳ್ಳಲು ವಿದ್ಯುತ್ ಸ್ಥಾವರದ ಮಾಲೀಕರಿಗೆ ಸೂಚಿಸುವುದು.

**4. ಕೆಲಸ ನಿರ್ವಹಿಸಲು ಇಲಾಖೆಯು ಸೃಜನೆ ಮಾಡಿಕೊಂಡಿರುವ ಪದ್ಧತಿಗಳು:**

ಕಛೇರಿ ಕಾರ್ಯ ವಿಧಾನ ಕೈಪಿಡಿಯಲ್ಲಿ ತಿಳಿಸಿರುವಂತೆ ಕಛೇರಿಯ ದೈನಂದಿನ ಕಾರ್ಯಗಳನ್ನು ನಿರ್ವಹಿಸುವುದು. ಡಿ.ಒ.ಪಿ. ಗೆ ಅನುಗುಣವಾಗಿ ವಿದ್ಯುತ್ ಸ್ಥಾವರಗಳ ನಕ್ಷೆ ಅನುಮೋದನೆ, ಪರಿವೀಕ್ಷಣೆ ಮತ್ತು ಅಂತಿಮ ಅನುಮೋದನೆ ಇವುಗಳನ್ನು ಇಲಾಖೆಯ ಪರಿವೀಕ್ಷಣಾ ಕೈಪಿಡಿಯಲ್ಲಿ ಸೂಚಿಸಿದಂತೆ ಮಾಡುವುದು. ತೆರಿಗೆ ಕೈಪಿಡಿಯನ್ವಯ ವಿದ್ಯುತ್ ತೆರಿಗೆ ವಸೂಲಿಗೆ ಕ್ರಮ ಕೈಗೊಳ್ಳುವುದು ಮತ್ತು ಲಿಫ್ಟ್ ವಿದ್ಯುತ್ ಸ್ಥಾವರಗಳನ್ನು ಲಿಫ್ಟ್ ಕಾಯ್ದೆ ಮತ್ತು ನಿಯಮಗಳ ಅನ್ವಯ ಪರಿವೀಕ್ಷಣೆ ಮಾಡುವುದು. ಕರ್ನಾಟಕ ಸಿನಿಮಾ ನಿಯಮಗಳ ಅನ್ವಯ ಸಿನಿಮಾ ವಿದ್ಯುತ್ ಸ್ಥಾವರಗಳ ಪರಿವೀಕ್ಷಣೆ ಮಾಡುವುದು. ಅಲ್ಲದೆ ಇಲಾಖಾ ಮುಖ್ಯಸ್ಥರು ಸುತ್ತೋಲೆಗಳ ಮುಖಾಂತರ ತಿಳಿಸುವಂತೆ ಕರ್ತವ್ಯಗಳನ್ನು ನಿರ್ವಹಿಸುವುದು.

**5. ಇಲಾಖೆಯ ಕಾರ್ಯ ಸಾಧನೆ ಮಾಡಲು ಇಲಾಖೆಯ ಸುಪರ್ದಿಯಲ್ಲಿರುವ, ಉಪಯೋಗಿಸಲಾಗುತ್ತಿರುವ ಅಥವಾ ಇಲಾಖೆಯ ಅಡಿಯಲ್ಲಿ ಬಳಸಲಾಗುತ್ತಿರುವ ನಿಯಮಗಳು, ಕಾನೂನು, ಆದೇಶಗಳು, ಕಾಯಿದೆಗಳು, ಕೈಪಿಡಿಗಳು ಇತ್ಯಾದಿ:**

1. ಕರ್ನಾಟಕ ನಾಗರೀಕ ಸೇವಾ ನಿಯಮಗಳು
2. ಕೆ.ಎಫ್.ಸಿ. 1958.
3. ಕೆ.ಟಿ.ಸಿ.
4. ಎಂ.ಸಿ.ಇ.
5. ಕಛೇರಿ ಕಾರ್ಯ ವಿಧಾನ ಕೈಪಿಡಿ.
6. ಕೆ.ಸಿ.ಎಸ್ (ಸಿಸಿಎ) ನಿಯಮಗಳು – 1957.
7. ಕೆ.ಸಿ.ಎಸ್ (ಕಂಡಕ್ಟ್) ನಿಯಮಗಳು– 1966.
8. ಭಾರತೀಯ ವಿದ್ಯುತ್ ಕಾಯ್ದೆ – 2003.
9. ಕೇಂದ್ರೀಯ ವಿದ್ಯುಚ್ಛಕ್ತಿ ಪ್ರಾಧಿಕಾರ ರೆಗ್ಯುಲೇಶನ್ಸ್, 2010.
10. ಕರ್ನಾಟಕ ಸಿನಿಮ (ನಿಯಂತ್ರಣ) ಕಾಯ್ದೆ 1964 ಮತ್ತು ನಿಯಮಗಳು 2014.
11. ಕರ್ನಾಟಕ ಲಿಫ್ಟ್ ಕಾಯ್ದೆ, 2012 ಮತ್ತು ನಿಯಮಗಳು – 2015.
12. ಕರ್ನಾಟಕ ವಿ ಸಿ ಆರ್ ಆರ್ ನಿಯಮಗಳು– 1984.
13. ಕರ್ನಾಟಕ ವಿದ್ಯುತ್ ಗುತ್ತಿಗೆದಾರರ ಪರವಾನಿಗೆ ಮತ್ತು ವಿದ್ಯುತ್ ಪರ್ಯವೇಕ್ಷಕರ ಮತ್ತು ತಂತಿ ಕೆಲಸಗಾರರ ರಹದಾರಿ ನೀಡುವಿಕೆ ನಿಯಮಗಳು – 2012.
14. ಕರ್ನಾಟಕ ವಿದ್ಯುಚ್ಛಕ್ತಿ ಬಳಕೆಯ ಅಥವಾ ಮಾರಾಟದ ಮೇಲಣ ತೆರಿಗೆ ಕಾಯ್ದೆ – 1959 ಮತ್ತು ನಿಯಮಗಳು – 2014.
15. ನ್ಯಾಷನಲ್ ಎಲೆಕ್ಟ್ರಿಕ್ ಕೋಡ್
16. ವಿದ್ಯುತ್ ಪರಿವೀಕ್ಷಣಾ ಕೈಪಿಡಿ ಮತ್ತು ವಿದ್ಯುತ್ ತೆರಿಗೆ ಕೈಪಿಡಿ.

**6. ಕಛೇರಿಯ ಅಧಿನದಲ್ಲಿರುವ ಅಥವಾ ಸುಪರ್ದಿಯಲ್ಲಿರುವ ದಾಖಲಾತಿಗಳು:**

**ಆಡಳಿತ ಶಾಖೆ:**

1. ಹಾಜರಾತಿ ಪುಸ್ತಕ.
2. ಸೇವಾ ಪುಸ್ತಕಗಳು ಹಾಗೂ ವೇತನ ರಿಜಿಸ್ಟರ್‌ಗಳು.
3. ವೇತನ ಸೆಳೆತ: ಸಾಲ ವಸೂಲಿ ಮುಂಗಡಗಳು ಇದಕ್ಕೆ ಸಂಬಂಧಪಟ್ಟ ರಿಜಿಸ್ಟರುಗಳು.
4. ವೇತನ ಬಟವಾಡೆ ಹಾಗೂ ಪ್ರವಾಸ ಭತ್ಯೆ ಹಣ ಬಟವಾಡೆ ಪುಸ್ತಕ.
5. ಬಿಲ್ ರಿಜಿಸ್ಟರ್‌ಗಳು.
6. ಗಳಿಕೆ ರಜೆ ನಗದೀಕರಣ ಮತ್ತು ರಜಾ ಮಂಜೂರಾತಿ ರಿಜಿಸ್ಟರ್.
7. ಆಡಳಿತ ಮತ್ತು ಕೋರ್ಟ್ ಕೇಸ್ ಫೈಲ್.

8. ಅನುದಾನ ಅಂದಾಜು ಮತ್ತು ಅನುದಾನ ಹಂಚಿಕೆ ರಿಜಿಸ್ಟರ್‌ಗಳು.
9. ಕಛೇರಿ ವೆಚ್ಚ ರಿಜಿಸ್ಟರ್‌ಗಳು.
10. ಆಡಳಿತ ವಿಷಯಕ್ಕೆ ಸಂಬಂಧಪಟ್ಟ ಕಡತಗಳು.
11. ಸ್ವೀಕೃತಿ ರವಾನೆ ರಿಜಿಸ್ಟರ್‌ಗಳು.
12. ದೂರವಾಣಿ ಪುಸ್ತಕ.
13. ಚಲನ ವಲನ ರಿಜಿಸ್ಟರ್‌ಗಳು.
14. ಸಾಮಾನ್ಯ ಆಡಳಿತಾತ್ಮಕ ಸುತ್ತೋಲೆಗಳ ಕಡತ.
15. ಕೋರ್ಟ್ ಕೇಸ್ ಕಡತ.
16. ವಿದ್ಯುಚ್ಛಕ್ತಿ ತೆರಿಗೆಗೆ ಸಂಬಂಧಪಟ್ಟ ಕಡತ.
17. ಆರ್. ಸಿ. ಬಿ ಫೈಲ್.
18. ನಗದು ಪುಸ್ತಕ ಮತ್ತು ರಶೀದಿ ಪುಸ್ತಕಗಳು.
19. ವೋಚರ್ ಕಡತ.
20. ನಗದು ಘೋಷಣ ರಿಜಿಸ್ಟರ್‌ಗಳು.
21. ಆರ್.ಟಿ.ಐ. ಕಡತ ಮತ್ತು ರಿಜಿಸ್ಟರ್‌ಗಳು.
22. ಸಿನೆಮಾ ಚಾಲಕರ ಪರ್ಮಿಟ್‌ಗಳ ನವೀಕರಣ ಹಾಗೂ ಹಿಂಬರಹಗಳ ಪುಸ್ತಕ.
23. ವಿದ್ಯುತ್‌ಗುತ್ತಿಗೆದಾರರ ಪರವಾನಿಗೆಗಳ ಹೊಸ ಮತ್ತು ನವೀಕರಣ ಅರ್ಜಿಗಳ ಸ್ವೀಕೃತಿ ಪುಸ್ತಕಗಳು.
24. ವಿದ್ಯುತ್ ಮೇಲ್ವಿಚಾರಕರು ಮತ್ತು ನವೀಕರಣ ಅರ್ಜಿಗಳ ಸ್ವೀಕೃತಿ ಪುಸ್ತಕಗಳು.
25. ವಿದ್ಯುತ್ ತಂತಿ ಕೆಲಸಗಾರರ ಹೊಸ ಮತ್ತು ನವೀಕರಣ ಅರ್ಜಿಗಳ ಸ್ವೀಕೃತಿ ಪುಸ್ತಕಗಳು.

**ತಾಂತ್ರಿಕ ವಿಭಾಗ:**

1. ವಿದ್ಯುತ್ ಸ್ಥಾವರಗಳ ನಿಯತಕಾಲಿಕ ಪರಿವೀಕ್ಷಣಾ ವಹಿ.
2. ನೀಲಿ ನಕ್ಷೆ ಅನುಮೋದನೆ ರಿಜಿಸ್ಟರ್‌ಗಳು.
3. ಚಾಲನಾ ಅನುಮೋದನೆ ರಿಜಿಸ್ಟರ್‌ಗಳು.
4. ವಾರ್ಷಿಕ ಮಾಹಿತಿ ಹಕ್ಕು ರಿರ್ಟನ್‌ಗಳು – (ಫಾರ್ಮ 1, 2, 3).
5. ವಿದ್ಯುತ್ ಅಪಘಾತಗಳ ಪತ್ರ ವ್ಯವಹಾರಗಳ ಮತ್ತು ಸುತ್ತೋಲೆಗಳ ರಿಜಿಸ್ಟರ್‌ಗಳು.
6. ತಾಂತ್ರಿಕ ಪತ್ರ ವ್ಯವಹಾರಗಳ ಮತ್ತು ಸುತ್ತೋಲೆಗಳ ರಿಜಿಸ್ಟರ್‌ಗಳು.

**7. ಇಲಾಖೆಯ ಕಾರ್ಯನೀತಿಯ ರಚನೆ ಅಥವಾ ಅದರ ಅನುಷ್ಠಾನಕ್ಕೆ ಸಂಬಂಧಿಸಿದಂತೆ ಸಾರ್ವಜನಿಕರೊಡನೆ ಸಮಾಲೋಚಿಸಲು ಅಥವಾ ಅವರ ಪ್ರಾತಿನಿಧ್ಯವಿರುವಂತೆ ಮಾಡಲು ಇರುವಂಥ ವ್ಯವಸ್ಥೆಯ ವಿವರಗಳು**

ಈ ಕಛೇರಿಗೆ ಅನ್ವಯಿಸುವುದಿಲ್ಲ.

**8. ಮಂಡಳಿಗಳು, ಪರಿಷತ್ತುಗಳು ಸಮಿತಿಗಳು ಅಥವಾ ಇತರ ನಿಕಾಯಗಳು ಮತ್ತು ಅದರ ಭಾಗವಾಗಿ ಅಥವಾ ಅದರ ಸಲಹೆಯ ಉದ್ದೇಶಕ್ಕಾಗಿ ರಚಿತವಾದ ಇಬ್ಬರು ಅಥವಾ ಹೆಚ್ಚು ವ್ಯಕ್ತಿಗಳನ್ನೊಳಗೊಂಡ ಮಂಡಳಿಗಳ ಪರಿಷತ್ತುಗಳ, ಸಮಿತಿಗಳ ಮತ್ತು ಇತರ ನಿಕಾಯಗಳ ಸಭೆಗಳು ಸಾರ್ವಜನಿಕರಿಗೆ ಮುಕ್ತವಾಗಿರುತ್ತವೆಯೇ ಅಥವಾ ಅಂತಹ ಸಭೆಗಳ ನಡಾವಳಿಗಳು ಸಾರ್ವಜನಿಕರಿಗೆ ದೊರೆಯುತ್ತವೆಯೇ ಎಂಬುದರ ವಿವರ ಪಟ್ಟಿ**

ಈ ಕಛೇರಿಗೆ ಅನ್ವಯಿಸುವುದಿಲ್ಲ

**9. ಅಧಿಕಾರಿಗಳು ಮತ್ತು ಸಿಬ್ಬಂದಿಗಳ ಮಾಹಿತಿ ಸೂಚಿ:**

| ಕ್ರಮ ಸಂಖ್ಯೆ: | ಹೆಸರು ಶ್ರೀಯುತ/ಶ್ರೀಮತಿ | ಪದನಾಮ | ದೂರವಾಣಿ |
|---|---|---|---|
| 1) | ಕೆ. ನಾಗರಾಜ್ | ಉಪ ಮುಖ್ಯ ವಿದ್ಯುತ್ ಪರಿವೀಕ್ಷಕರು | 080–23354509 |
| 2) | ಜಿ. ರವಿಕುಮಾರ್ | ವಿದ್ಯುತ್ ಪರಿವೀಕ್ಷಕರು | 080–23354509 |
| 3) | ರಾಧ ಜಿ. | ಉಪ ವಿದ್ಯುತ್ ಪರಿವೀಕ್ಷಕರು | 080–23354509 |
| 4) | ಶಿಲ್ಪಾ ಆರ್. | ಸಹಾಯಕ ವಿದ್ಯುತ್ ಪರಿವೀಕ್ಷಕರು (ಕಛೇರಿ) | 080–23354509 |
| 5) | ಖಾಲಿ ಇದೆ. | ಸಹಾಯಕ ವಿದ್ಯುತ್ ಪರಿವೀಕ್ಷಕರು–1 | 080–23354509 |
| 6) | ಖಾಲಿ ಇದೆ. | ಸಹಾಯಕ ವಿದ್ಯುತ್ ಪರಿವೀಕ್ಷಕರು–2 | 080–23354509 |

| | | | |
|---|---|---|---|
| 7) | ವಿಜಯಕುಮಾರ್ ಕೆ.ಜಿ. | ಸಹಾಯಕ ವಿದ್ಯುತ್ ಪರಿವೀಕ್ಷಕರು-3 | 080-23354509 |
| 8) | ಉಷಾ ಜಿ. ಎನ್. | ಅಧೀಕ್ಷಕರು | 080-23354509 |
| 9) | ಖಾಲಿ ಇದೆ. | ಪ್ರ.ದ.ಸ | 080-23354509 |
| 10) | ರಾಮಕೃಷ್ಣಯ್ಯ ಕೆ. | ದ್ವಿ.ದ.ಸ-1, | 080-23354509 |
| 11) | ಖಾಲಿ ಇದೆ. | ದ್ವಿ.ದ.ಸ-2 | 080-23354509 |
| 12) | ಖಾಲಿ ಇದೆ. | ವಾಹನ ಚಾಲಕ | 080-23354509 |
| 13) | ಖಾಲಿ ಇದೆ. | ಸಹಾಯಕರು | 080-23354509 |
| 14) | ಖಾಲಿ ಇದೆ. | ಗ್ರೂಪ್ 'ಡಿ' ಜವಾನ | 080-23354509 |
| 15) | ಖಾಲಿ ಇದೆ. | ಗಣಕ ಯಂತ್ರ ಆಪರೇಟರ್ | 080-23354509 |

**10. ಅಧಿಕಾರಿಗಳ ಮತ್ತು ಸಿಬ್ಬಂದಿ ಸ್ವಿಕರಿಸುತ್ತಿರುವ ವೇತನ :**

| ಕ್ರಮ ಸಂಖ್ಯೆ: | ಹೆಸರು ಶ್ರೀಯುತ/ಶ್ರೀಮತಿ | ಪದನಾಮ | ವೇತನ ಶ್ರೇಣಿ |
|---|---|---|---|
| 1) | ಕೆ. ನಾಗರಾಜ್ | ಉಪ ಮುಖ್ಯ ವಿದ್ಯುತ್ ಪರಿವೀಕ್ಷಕರು | ರೂ.74400-109600 |
| 2) | ಜಿ. ರವಿಕುಮಾರ್ | ವಿದ್ಯುತ್ ಪರಿವೀಕ್ಷಕರು | ರೂ.67550-104600 |
| 3) | ರಾಧ ಜಿ. | ಉಪ ವಿದ್ಯುತ್ ಪರಿವೀಕ್ಷಕರು | ರೂ.52650-97100 |
| 4) | ಶಿಲ್ಪಾ ಆರ್. | ಸಹಾಯಕ ವಿದ್ಯುತ್ ಪರಿವೀಕ್ಷಕರು (ಕಛೇರಿ) | ರೂ.43100-83900 |
| 5) | ಖಾಲಿ ಇದೆ. | ಸಹಾಯಕ ವಿದ್ಯುತ್ ಪರಿವೀಕ್ಷಕರು-1 | ರೂ.43100-83900 |
| 6) | ಖಾಲಿ ಇದೆ. | ಸಹಾಯಕ ವಿದ್ಯುತ್ ಪರಿವೀಕ್ಷಕರು-2 | ರೂ.43100-83900 |
| 7) | ವಿಜಯಕುಮಾರ್ ಕೆ.ಜಿ. | ಸಹಾಯಕ ವಿದ್ಯುತ್ ಪರಿವೀಕ್ಷಕರು-3 | ರೂ.43100-83900 |
| 8) | ಉಷಾ ಜಿ. ಎನ್. | ಅಧೀಕ್ಷಕರು | ರೂ.37900-70850 |
| 9) | ಖಾಲಿ ಇದೆ. | ಪ್ರ.ದ.ಸ | ರೂ.27650-52650 |
| 10) | ರಾಮಕೃಷ್ಣಯ್ಯ ಕೆ. | ದ್ವಿ.ದ.ಸ-1, | ರೂ.21400-42000 |
| 11) | ಖಾಲಿ ಇದೆ. | ದ್ವಿ.ದ.ಸ-2 | ರೂ.21400-42000 |
| 12) | ಖಾಲಿ ಇದೆ. | ವಾಹನ ಚಾಲಕ | ರೂ.21400-42000 |
| 13) | ಖಾಲಿ ಇದೆ. | ಸಹಾಯಕರು | ರೂ.18600-32600 |
| 14) | ಖಾಲಿ ಇದೆ. | ಗ್ರೂಪ್ 'ಡಿ' ಜವಾನ | ರೂ.17000-28950 |
| 15) | ಖಾಲಿ ಇದೆ. | ಗಣಕ ಯಂತ್ರ ಆಪರೇಟರ್ | ರೂ.27650-52650 |

**11. ಎಲ್ಲಾ ಯೋಜನೆಗಳ ವಿವರಗಳನ್ನು ಸೂಚಿಸುವ ಪ್ರಸ್ತಾವಿತ ವೆಚ್ಚಗಳನ್ನು ಮತ್ತು ಮಾಡಲಾದ ಬಟವಾಡೆಗಳ ವರದಿಯನ್ನು ಸೂಚಿಸಿ ಅದರ ಪ್ರತಿಯೊಂದು ಏಜೆನ್ಸಿಗೆ ಹಂಚಿಕೆ ಮಾಡಲಾದ ಆಯವ್ಯಯ:**

ಈ ಕಛೇರಿಗೆ ಅನ್ವಯಿಸುವುದಿಲ್ಲ

**12. ಹಂಚಿಕೆ ಮಾಡಲಾದ ಮೊಬಲಗನ್ನೊಳಗೊಂಡು ಸಹಾಯಧನ ಕಾರ್ಯಕ್ರಮಗಳ ಜಾರಿಯ ವಿಧಾನವನ್ನು ಮತ್ತು ಅಂತಹ ಕಾರ್ಯಕ್ರಮಗಳ ಫಲಾನುಭವಿಗಳ ವಿವರ**

ಈ ಕಛೇರಿಗೆ ಸಂಬಂಧಿಸಿರುವುದಿಲ್ಲ

**13. ನೀಡಿರುವ ರಿಯಾಯತಿಗಳನ್ನು ಅನುಮತಿ ಪತ್ರಗಳನ್ನು ಅಥವಾ ಅಧಿಕಾರ ಪತ್ರಗಳನ್ನು ಪಡೆಯುವವರ ವಿವರ**

ಈ ಕಛೇರಿಗೆ ಅನ್ವಯಿಸುವುದಿಲ್ಲ

**14. ಕಛೇರಿಯ ಬಳಿ ಲಭ್ಯವಿರುವ ಅಥವಾ ಅದು ಹೊಂದಿರುವ ವಿದ್ಯುನ್ಮಾನ ರೂಪಕ್ಕೆ ಪರಿವರ್ತಿಸಿರುವ, ಮಾಹಿತಿಗೆ ಸಂಬಂಧಿಸಿದ ವಿವರ**

ಈ ಕಛೇರಿಗೆ ಅನ್ವಯಿಸುವುದಿಲ್ಲ

**15. ಸಾರ್ವಜನಿಕ ಉಪಯೋಗಕ್ಕಾಗಿ ಗ್ರಂಥಾಲಯವನ್ನು ಅಥವಾ ವಾಚನಾಲಯವನ್ನು ನಿರ್ವಹಿಸುತ್ತಿದ್ದಲ್ಲಿ ಅದರ ಕೆಲಸದ ಸಮಯವನ್ನೊಳಗೊಂಡ ಮಾಹಿತಿ ಪಡೆಯಲು ಸಾರ್ವಜನಿಕರಿಗೆ ಲಭ್ಯವಿರುವ ಸೌಲಭ್ಯಗಳ ವಿವರ.**

ಈ ಕಛೇರಿಗೆ ಸಂಬಂಧಿಸಿರುವುದಿಲ್ಲ.

**16. ಸಾರ್ವಜನಿಕ ಮಾಹಿತಿ ಅಧಿಕಾರಿಗಳ ಹೆಸರುಗಳು, ಪದನಾಮಗಳು.**

| ಕ್ರಮ ಸಂಖ್ಯೆ | ಅಧಿಕಾರಿಗಳ ಹೆಸರು | ಅಧಿಕಾರಿಗಳ ಪದನಾಮ | ಮಾಹಿತಿ ಹಕ್ಕು 2005 ರ ಪ್ರಕಾರ ಹುದ್ದೆ |
|---|---|---|---|
| 1 | ರವಿಕುಮಾರ್ ಜಿ. | ವಿದ್ಯುತ್ ಪರಿವೀಕ್ಷಕರು, ಬೆಂಗಳೂರು ಹೆಚ್ಚುವರಿ ಉತ್ತರ, ಬೆಂಗಳೂರು | ಸಾರ್ವಜನಿಕ ಮಾಹಿತಿ ಅಧಿಕಾರಿ (ಕಾರ್ಯ ವ್ಯಾಪ್ತಿ ಹಾಗು ಅಧಿಕಾರ ಪ್ರತ್ಯಾಯೋಜನೆ ಸಂಬಂಧಪಟ್ಟ ಉಪ ಮುಖ್ಯ ವಿದ್ಯುತ್ ಪರಿವೀಕ್ಷಕರು, ಬೆಂಗಳೂರು ಹೆಚ್ಚುವರಿ ಉತ್ತರ ಕಛೇರಿಯ ತಾಂತ್ರಿಕ ಮಾಹಿತಿ). |
| 2 | ರಾಧ ಜಿ. | ಉಪ ವಿದ್ಯುತ್ ಪರಿವೀಕ್ಷಕರು, ಬೆಂಗಳೂರು ಹೆಚ್ಚುವರಿ ಉತ್ತರ, ಬೆಂಗಳೂರು | ಸಾರ್ವಜನಿಕ ಮಾಹಿತಿ ಅಧಿಕಾರಿ (ಕಾರ್ಯ ವ್ಯಾಪ್ತಿ ಹಾಗು ಅಧಿಕಾರ ಪ್ರತ್ಯಾಯೋಜನೆ ಸಂಬಂಧಪಟ್ಟ ಉಪ ಮುಖ್ಯ ವಿದ್ಯುತ್ ಪರಿವೀಕ್ಷಕರು, ಬೆಂಗಳೂರು ಹೆಚ್ಚುವರಿ ಉತ್ತರ ಕಛೇರಿಯ ತಾಂತ್ರಿಕ ಮಾಹಿತಿ). |
| 3 | ಶಿಲ್ಪಾ ಆರ್. | ಸಹಾಯಕ ವಿದ್ಯುತ್ ಪರಿವೀಕ್ಷಕರು–ಕಛೇರಿ | ಸಾರ್ವಜನಿಕ ಮಾಹಿತಿ ಅಧಿಕಾರಿ (ಉಪ ಮುಖ್ಯ ವಿದ್ಯುತ್ ಪರಿವೀಕ್ಷಕರು, ಬೆಂಗಳೂರು ಹೆಚ್ಚುವರಿ ಉತ್ತರ ಕಛೇರಿಯ ತಾಂತ್ರಿಕ ಮಾಹಿತಿ). |
| 4 | ಉಷಾ ಜಿ. ಎನ್. | ಅಧೀಕ್ಷಕರು | ಸಹಾಯಕ ಸಾರ್ವಜನಿಕ ಮಾಹಿತಿ ಅಧಿಕಾರಿ, (ಬೆಂಗಳೂರು ಹೆಚ್ಚುವರಿ ಉತ್ತರ ಕಛೇರಿ ಆಡಳಿತ ವಿವರ). |

**ಸಹಾಯಕ ಸಾರ್ವಜನಿಕ ಮಾಹಿತಿ ಅಧಿಕಾರಿಗಳ ಹೆಸರುಗಳು, ಪದನಾಮಗಳು**

| ಕ್ರಮ ಸಂಖ್ಯೆ | ಅಧಿಕಾರಿಗಳ ಹೆಸರು | ಅಧಿಕಾರಿಗಳ ಪದನಾಮ | ಮಾಹಿತಿ ಹಕ್ಕು 2005 ರ ಪ್ರಕಾರ ಹುದ್ದೆ |
|---|---|---|---|
| 1 | ಶಿಲ್ಪಾ ಆರ್. | ಸಹಾಯಕ ವಿದ್ಯುತ್ ಪರಿವೀಕ್ಷಕರು–ಕಛೇರಿ | ಉಪ ಮುಖ್ಯ ವಿದ್ಯುತ್ ಪರಿವೀಕ್ಷಕರು, ಬೆಂಗಳೂರು ಹೆಚ್ಚುವರಿ ಉತ್ತರ ಕಛೇರಿಯ ತಾಂತ್ರಿಕ ಮಾಹಿತಿ |
| 2 | ಖಾಲಿ ಇದೆ. | ಸಹಾಯಕ ವಿದ್ಯುತ್ ಪರಿವೀಕ್ಷಕರು–1 | ಕಾರ್ಯ ವ್ಯಾಪ್ತಿ ಹಾಗು ಅಧಿಕಾರ ಪ್ರತ್ಯಾಯೋಜನೆ ಸಂಬಂಧಪಟ್ಟ ಉಪ ಮುಖ್ಯ ವಿದ್ಯುತ್ ಪರಿವೀಕ್ಷಕರು, ಬೆಂಗಳೂರು ಹೆಚ್ಚುವರಿ ಉತ್ತರ ಕಛೇರಿಯ ತಾಂತ್ರಿಕ ಮಾಹಿತಿ |
| 3 | ಖಾಲಿ ಇದೆ. | ಸಹಾಯಕ ವಿದ್ಯುತ್ ಪರಿವೀಕ್ಷಕರು–2 | ಕಾರ್ಯ ವ್ಯಾಪ್ತಿ ಹಾಗು ಅಧಿಕಾರ ಪ್ರತ್ಯಾಯೋಜನೆ ಸಂಬಂಧಪಟ್ಟ ಉಪ ಮುಖ್ಯ ವಿದ್ಯುತ್ ಪರಿವೀಕ್ಷಕರು, ಬೆಂಗಳೂರು ಹೆಚ್ಚುವರಿ ಉತ್ತರ ಕಛೇರಿಯ ತಾಂತ್ರಿಕ ಮಾಹಿತಿ |
| 4 | ವಿಜಯಕುಮಾರ್ ಕೆ.ಜಿ. | ಸಹಾಯಕ ವಿದ್ಯುತ್ ಪರಿವೀಕ್ಷಕರು–3 | ಕಾರ್ಯ ವ್ಯಾಪ್ತಿ ಹಾಗು ಅಧಿಕಾರ ಪ್ರತ್ಯಾಯೋಜನೆ ಸಂಬಂಧಪಟ್ಟ ಉಪ ಮುಖ್ಯ ವಿದ್ಯುತ್ ಪರಿವೀಕ್ಷಕರು, ಬೆಂಗಳೂರು ಹೆಚ್ಚುವರಿ ಉತ್ತರ ಕಛೇರಿಯ ತಾಂತ್ರಿಕ ಮಾಹಿತಿ |

17. ಯಾವುದೇ ವಿಷಯದ ಮಾಹಿತಿಗಾಗಿ ಕಛೇರಿ ಸಮಯದಲ್ಲಿ ಸಂಪರ್ಕಿಸಬಹುದಾಗಿದೆ ಮತ್ತು ಪ್ರತಿ ವರ್ಷ ಈ ಮಾಹಿತಿಗಳನ್ನು ನವೀಕರಿಸಲು ವ್ಯವಸ್ಥೆ ಮಾಡಲಾಗಿದೆ.

ಗಮನಿಸಿ: ಪರಿವೀಕ್ಷಣಾಧಿಕಾರಿಗಳಿಗೆ ಡಿ.ಒ.ಪಿ. (ಸರ್ಕಾರದ ಆದೇಶ ಸಂ. ಇ. ಎನ್ 5 ಇ.ಬಿ.ಎಸ್ 2012 ದಿ: 12-09-2013) ಕಛೇರಿಯಲ್ಲಿ ಲಭ್ಯವಿರುತ್ತದೆ ಅತವಾ ಇಲಾಖಾ ವೆಬ್ ವಿಳಾಸ: **http//www.ksei.gov.in** ಇಲ್ಲಿಯೂ ಲಭ್ಯವಿರುತ್ತದೆ

ಮೊದಲನೆ ಅಪೀಲು ಅಧಿಕಾರಿ ಹೆಸರು ಮತ್ತು ಹುದ್ದೆ:
ಶ್ರೀ. ಕೆ. ನಾಗರಾಜ್,
ಉಪ ಮುಖ್ಯ ವಿದ್ಯುತ್ ಪರಿವೀಕ್ಷಕರು,
ಬೆಂಗಳೂರು ಹೆಚ್ಚುವರಿ ಉತ್ತರ,
ಬೆಂಗಳೂರು

13/12
ಉಪ ಮುಖ್ಯ ವಿದ್ಯುತ್ ಪರಿವೀಕ್ಷಕರು,
ಬೆಂಗಳೂರು ಹೆಚ್ಚುವರಿ ಉತ್ತರ,
ಬೆಂಗಳೂರು

ಮೆಮೊ ಸಂಖ್ಯೆ: ಉಮುವಿಪ/ಬೆಂ.ಹೆ.ಉ/4619/2018-19 ದಿನಾಂಕ: 13 DEC 2018

ಪ್ರತಿಗಳನ್ನು ಸೂಕ್ತ ಮಾಹಿತಿ ಮತ್ತು ಅವಗಾಹನೆಗಾಗಿ ಈ ಕೆಳಗಿನವರಿಗೆ ಸಲ್ಲಿಸಲಾಗಿದೆ

1. ಕಾರ್ಯದರ್ಶಿಯವರು, ಕೆ.ಇ.ಆರ್.ಸಿ, ಮಹಾಲಕ್ಷ್ಮೀ ಚೇಂಬರ್ಸ್, ಬೆಂಗಳೂರು-560001.
2. ಮುಖ್ಯ ವಿದ್ಯುತ್ ಪರಿವೀಕ್ಷಕರು, ಕರ್ನಾಟಕ ಸರ್ಕಾರ, ಬೆಂಗಳೂರು-560001.
3. ಅಪರ ಮುಖ್ಯ ವಿದ್ಯುತ್ ಪರಿವೀಕ್ಷಕರು, ಬೆಂಗಳೂರು ಉತ್ತರ, ರಾಜಾಜಿನಗರ, ಬೆಂಗಳೂರು-560010.

ಪ್ರತಿಗಳನ್ನು ಇವರ ಗಮನಕ್ಕೆ:

1. ಎಲ್ಲಾ ಸಾರ್ವಜನಿಕ ಮಾಹಿತಿ ಅಧಿಕಾರಿಗಳ ಮಾಹಿತಿಗಾಗಿ.
2. ಕ.ಕ ಮತ್ತು ಮು.ಕ

13/12
ಉಪ ಮುಖ್ಯ ವಿದ್ಯುತ್ ಪರಿವೀಕ್ಷಕರು,
ಬೆಂಗಳೂರು ಹೆಚ್ಚುವರಿ ಉತ್ತರ,
ಬೆಂಗಳೂರು

ಉಪ ಮುಖ್ಯ ವಿದ್ಯುತ್ ಪರಿವೀಕ್ಷಕರು
ಬೆಂಗಳೂರು ಹೆಚ್ಚುವರಿ ಉತ್ತರ
ಬೆಂಗಳೂರು-560 086